# ಹದವರಿತ ಅಭಿನಯ

ಅವರ ಕೈಗಳಲ್ಲಿ ಹಲವು ಬಂಗಾರದ ಬಳೆಗಳು. ಹಣೆಬೊಟ್ಟಿನ ಬಣ್ಣವೂ ಬಂಗಾರದ್ದೆ. ಹೇಳಿ ಕೇಳಿ ಅವರು ಬಂದದ್ದು ಒಡವೆಯ ಪ್ರಮೋಷನ್‌ಗಾಗಿ. ಆದದ್ದರಿಂದ ಆ ಗೆಟಪ್ ಸಂದರ್ಭೋಚಿತವಾಗಿತ್ತು. ಉಟ್ಟ ಸೀರೆಯಲ್ಲೂ ಬಂಗಾರದ್ದೇ ಕುಸುರಿ ಕಂಡು ಫೋಟೊಗ್ರಾಫರ್‌ಗಳೂ ದಂಗು. ಇಷ್ಟ ಬಂದಂತೆ ಫೋಟೊ ತೆಗೆಯುವ ಸ್ವಾತಂತ್ರ್ಯ ಫೋಟೊಗ್ರಾಫರ್‌ಗಳಿಗೆ ಇರಲಿಲ್ಲ. ನೆರಿಗೆಯನ್ನು ಪಕ್ಕಾ ರೀತಿಯಲ್ಲಿ ಸರಿಪಡಿಸಿಕೊಂಡು, ಒಡವೆಗಳು ಕಾಣುವಂತೆ ಮಾತ್ರ ಫೋಟೊ ತೆಗೆಯುವ ಅವಕಾಶವನ್ನು ದೂರದಿಂದ ಬಂದ ಫೋಟೊಗ್ರಾಫರ್‌ಗಳಿಗೆ ನೀಡಲಾಗಿತ್ತು. ‘ನೌ... ಸ್ಟಾಪ್ ಪ್ಲೀಸ್’ ಎಂದು ಅವರು ಹೇಳಿದೊಡನೆ ಫೋಟೊ ತೆಗೆಯುವ ಭರಾಟೆ ದಿಢೀರನೆ ಸ್ಥಗಿತಗೊಂಡಿತು. ಹಾಗೆ ಸ್ಥಗಿತಗೊಳ್ಳುವ ಮೊದಲು ಅವರ ಒಂದೆರಡು ವಿಭಿನ್ನ ಪೋಸ್‌ಗಳಿಗಾಗಿ ಹಾತೊರೆದ ಫೋಟೊಗ್ರಾಫರ್‌ಗಳ ಸಂಖ್ಯೆ ಕಡಿಮೆಯೇನೂ ಇರಲಿಲ್ಲ.

ಒಡವೆಗಳ ಸಂಗ್ರಹದ ಕುರಿತು ಎಣಿಸಿದಂತೆ ನಾಲ್ಕೈದು ಮಾತಾಡಿದ ನಟೀಮಣಿ ಆಮೇಲೆ ಆಯ್ದ ಸುದ್ದಿಮಿತ್ರರಿಗೆ ಚುಟುಕು ಸಂದರ್ಶನ ನೀಡಲು ಸಜ್ಜಾದರು. ಆರಾಮ ಕುರ್ಚಿ ಅವರಿದ್ದಲ್ಲಿಗೇ ಬಂದಿತು. ‘ಗಿಮ್ಮಿ ಫ್ಯೂ ಮಿನಟ್ಸ್’ ಎಂದು ನೆಪಮಾತ್ರಕ್ಕೆ ಅನುಮತಿ ಕೇಳಿದರು. ವೃತ್ತಾಕಾರದ ಕನ್ನಡಿಯನ್ನು ಒಬ್ಬಾತ ತಂದು ಹಿಡಿದ. ಅವರು ಬಿಂದಿಯನ್ನು ತೆಗೆದರು. ಸಹಾಯಕಿ ಇನ್ನೊಂದು ಬಿಂದಿ ಇಟ್ಟರು. ಅದು ಬಣ್ಣ, ಆಕಾರ ಎರಡರಲ್ಲೂ ಬೇರೆಯದೇ ಆಗಿತ್ತು. ಫೋಟೊ ಬೆಳಕು ಮೂಡಿಸಿರಬಹುದಾದ ಬೆವರಿನ ಸಣ್ಣ ಸಣ್ಣ ಹನಿಗಳನ್ನು ಸಹಾಯಕಿ ಮೃದು ಬಟ್ಟೆಯಿಂದ ಒರೆಸಿದಂತೆ ಮಾಡಿದರು. ತುಟಿಬಣ್ಣ ತೀಡಿದ ಮೇಲೆ ಮುಖಕ್ಕೆ ಯಾವುದೋ ಕ್ರೀಮ್ ಹಚ್ಚಿದ್ದಾಯಿತು. ಇವನ್ನೆಲ್ಲಾ ಆಯ್ದ ಪತ್ರಕರ್ತರು ಮಿಕಮಿಕ ನೋಡುತ್ತಾ ಕೂರುವುದು ಅನಿವಾರ್ಯವಾಗಿತ್ತು. ಆ ನಟಿ ಹಿಂದಿ ಸಿನಿಮಾದ ಮಳೆ ಹಾಡಿನಲ್ಲಿ ಅನಿಲ್ ಕಪೂರ್ ಜೊತೆಯಲ್ಲಿ ಹಿಂದೆ ಕಂಡಿದ್ದ ಪರಿ, ಅವರ ಅಭಿನಯದ ಹದ, ನೃತ್ಯದ ಲಾಲಿತ್ಯ, ಲವಲವಿಕೆ ಎಲ್ಲವನ್ನೂ ಕುಳಿತವರು ಗುಸುಗುಸು ಎಂದು ಗುನುಗತೊಡಗಿದರು. ಅವುಗಳಲ್ಲಿ ಕೆಲವು ಮಾತುಗಳು ನಟಿಯ ಕಿವಿಮೇಲೆ ಬಿದ್ದಿರಲಿಕ್ಕೂ ಸಾಕು. ಅದರಿಂದ ಅವರು ತುಸುವೂ ವಿಚಲಿತರಾದಂತೆ ಕಾಣಲಿಲ್ಲ.

ಕೊನೆಗೂ ಪ್ರಶ್ನೆ ಕೇಳುವ ಅವಕಾಶ ಒದಗಿಬಂದಿತು. ಮೊದಲ ಪ್ರಶ್ನೆ– ‘ನೀವು ಇತ್ತೀಚೆಗೆ ಯಾಕೆ ಸಿನಿಮಾಗಳಲ್ಲಿ ಅಭಿನಯಿಸುತ್ತಿಲ್ಲ? ಸಂಸಾರವಂದಿಗರಾದ ನಟಿಯರಿಗೆ ಇದು ಅನಿವಾರ್ಯವೇ’. ನಟೀಮಣಿ ಮೂವತ್ತು ಸೆಕೆಂಡ್ ಯೋಚಿಸಿ, ‘ಒಳ್ಳೆಯ ಸ್ಕ್ರಿಪ್ಟ್ ಸಿಕ್ಕರೆ ಅಭಿನಯಿಸಬಾರದು ಎಂದೇನೂ ಇಲ್ಲ. ಮದುವೆಯಾದ ಮೇಲೆ ಎಲ್ಲರಿಗೂ ಅವಕಾಶಗಳೇನೂ ಬಂದ್ ಆಗುವುದಿಲ್ಲ’ ಎಂದರು. ಮಳೆ ಹಾಡಿನಲ್ಲಿ ಅಭಿನಯಿಸುವ ಕಷ್ಟದ ಕುರಿತು ಎರಡನೇ ಪ್ರಶ್ನೆ ಎದುರಾಯಿತು. ಅಲ್ಲಿಂದಾಚೆಗೆ ಅವರು ಎರಡು ಮೂರು ಸಲ ‘ನೆಕ್ಸ್ಟ್ ಕ್ವೆಶ್ಚನ್’ ಎಂದರು. ಆಮೇಲೆ ‘ದಿ ಇಂಟರ್‌ವ್ಯೂ ಈಸ್ ಓವರ್. ಐ ಆ್ಯಮ್ ಡನ್’ ಎಂದು ಮೇಲೆದ್ದರು. ಈ ಘಟನೆ ನಡೆದ ಕೆಲವು ವರ್ಷಗಳ ನಂತರ ಅವರು ಹಿಂದಿ ಸಿನಿಮಾ ಮೂಲಕ ಚಿತ್ರರಂಗವನ್ನು ಮರುಪ್ರವೇಶಿಸಿದರು. ಗೃಹಿಣಿಯೊಬ್ಬಳು ವಿದೇಶಕ್ಕೆ ಹೋಗಿ ಇಂಗ್ಲಿಷ್ ಕಲಿಯುವ ಕಥಾನಕದ ಆ ಸಿನಿಮಾ ಸೂಪರ್ ಹಿಟ್ ಆಯಿತು.

● **ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68